

ನೆಲದ ಮೇಲಲ್ಲ, ಬಹುಮಹಡಿ ಕಟ್ಟಡದ ಏಳನೆಯ ಅಂತಸ್ತಿನಲ್ಲಿ. ಲಿಫ್ಟಿನಲ್ಲಿ ಮೇಲೇರಬೇಕಾದ ಅನಿವಾರ್ಯ. ಗಾಳಿ, ಬೆಳಕು ಧಾರಾಳವಾಗಿರುವುದರಿಂದ ಎತ್ತರ ಹೆಚ್ಚಾದಷ್ಟೂ ದರ ದುಬಾರಿ ಅನ್ನುವ ಮಾತು ಅಪ್ಪನಿಗೆ ಜೀರ್ಣಿಸಿಕೊಳ್ಳಲಾಗಿರಲಿಲ್ಲ. ನೆಲದ ಸಂಪರ್ಕವಿಲ್ಲದೆ ತ್ರಿಶಂಕುವಿನಂತೆ ಅಂರಿಕ್ಷದಲ್ಲೆಂಬಂತೆ ಬದುಕುವುದು ಅವರ ಮಟ್ಟಿಗೆ ಅಸಂಭವ ಅನಿಸತೊಡಗಿತ್ತು. ಮಗ ಹೇಳಿದಂತೆ ನಾಲ್ಕು ಕೋಣೆಗಳ ಅತ್ಯಾಧುನಿಕ ವಿನ್ಯಾಸದ, ಆಕರ್ಷಕ ನೆಲಹಾಸಿನ ಸುವಿಶಾಲ ಮನೆ. ಎಲ್ಲದಕ್ಕೂ ಪ್ರತ್ಯೇಕ ಶೌಚಾಲಯಗಳು. ಇವರ ಹಳೆಮನೆಯ ಅರ್ಧದಷ್ಟಿರುವ ದೊಡ್ಡ ಹಾಲ್. ಕೆಲಸದವರಿಗೆಂದೇ ಮೀಸಲಿಟ್ಟ ಸಣ್ಣದೊಂದು ಕೋಣೆ, ಎರಡು ಕಡೆ ಬಾಲ್ಕನಿ. ಇಟಾಲಿಯನ್ ಕಿಚನ್ ಎಂದು ಮಗ ಪರಿಚಯಿಸಿದ ಅಡುಗೆಮನೆ. ತಮ್ಮ ಅಡುಗೆಮನೆಯಲ್ಲಿ ದಿನಸಿಪದಾರ್ಥಗಳನ್ನು ತುಂಬಿಟ್ಟುಕೊಂಡ ಹಳೆಗಾಲದ ಡಬ್ಬಿಗಳ ನೆನಪಾಗಿತ್ತು ಅಪ್ಪನಿಗೆ. ಇಲ್ಲಿ ಯಾವುದೂ ಹೊರಗೆ ಪ್ರದರ್ಶನಗೊಳ್ಳದ ಸುವ್ಯವಸ್ಥೆ.

ತೇಗದ ಮರದ ಕಿಟಕಿ, ಬಾಗಿಲುಗಳ ಮೆರುಗು. ಒಳಗಿನ ವೈಭೋಗ ಒಂದು ಥರದ್ದಾದರೆ ಹೊರಗಿನದು ಮತ್ತೊಂದು. ಮಗ ಹೇಳಿದಂತೆ ಈಜುಕೊಳ, ವ್ಯವಸ್ಥಿತವಾಗಿ ಬೆಳೆಸಿದ ಉದ್ಯಾನವನ, ಪಾರ್ಕಿಂಗಿನಲ್ಲಿ ನಿಂತ ಕಾರುಗಳ ಸಂಖ್ಯೆ ನೋಡಿ ನಿಬ್ಬೆರಗಾಗಿದ್ದರು ಅಪ್ಪ. 'ನೂರಿಪ್ಪತ್ತು ಮನೆಗಳಿದಾವೆ ಅಪ್ಪಾ, ಒಂದೊಂದು ಬ್ಲಾಕಿನಲ್ಲಿ...' ಎಂದೇನೋ ಸಂತೋಷ ಕೊಟ್ಟಿದ್ದ ಲೆಕ್ಕ ಅವರ ಮೆದುಳಿಗಿಳಿದಿರಲಿಲ್ಲ. 'ಜನರ ಹತ್ತಿರ ಈ ಪರಿ ದುಡ್ಡು ಬಂದಿದ್ದು ಎಲ್ಲಿಂದ?' ಎಂದು ಅವರಿಗೆ ಬೆರಗು. ಇದು ತಮ್ಮಂತವರಿಗೆ ಒಗ್ಗದ ಪ್ರತ್ಯೇಕ ಲೋಕ ಎನ್ನುವ ಹಿಂಜರಿಕೆ. ಕಣ್ಣು ಕಟ್ಟಿ ಜಾತ್ರೆಯಲ್ಲಿ ಬಿಟ್ಟಂತ ಅಪರಿಚಿತ ಭಾವನೆ. ಕನ್ನಡಕ್ಕೆ ಇಲ್ಲಿ ಬಹಿಷ್ಕಾರ ಎನ್ನುವಂತೆ ಕಣ್ಣಿಗೆ ಬಿದ್ದ ಎಲ್ಲರೂ ಇಂಗ್ಲಿಷಿನಲ್ಲಿಯೇ ಸಂವಹನ ಮಾಡುತ್ತಾ, ತಾವಿರುವುದು ಕರ್ನಾಟಕದ ರಾಜಧಾನಿಯಲ್ಲೋ, ಅಥವಾ ಯಾವುದೋ ಪರದೇಶದ ನೆಲೆಯಲ್ಲೋ ಎನ್ನುವ ಭ್ರಾಂತಿ. ಅಲ್ಲಿ ಆಟವಾಡುತ್ತಿದ್ದ ಸಣ್ಣ ಮಕ್ಕಳೂ ಕೂಡಾ ಇಂಗ್ಲಿಷಿನಲ್ಲಿ ಚಿಲಿಪಿಲಿಗುಟ್ಟುತ್ತಾ, ಮಗ ತನ್ನ ಮಕ್ಕಳು ಈ ವಾತಾವರಣದಲ್ಲಿ ಬೆಳೆಯಬೇಕು ಎಂದು ಯಾಕೆ ಹಂಬಲಿಸುತ್ತಿದ್ದಾನೆ ಎನ್ನುವುದನ್ನು ತಮ್ಮದೇ ರೀತಿಯಲ್ಲು ಅರ್ಥೈಸಿಕೊಂಡಿದ್ದರು ಅಪ್ಪ. ಅವನ ಮಟ್ಟಿಗೆ ಹಾಗೆನಿಸುವುದು ಸಹಜವೇ. ಕಾಲದ ಓಟದಲ್ಲಿ ಯಾವುದು ಅನಿವಾರ್ಯವೋ ಅದರ ಜೊತೆ ಓಡದಿದ್ದರೆ ಇವತ್ತಿನ ಪೈಪೋಟಿಯ ಯುಗದಲ್ಲಿ ಹಿಂದೆ ಬೀಳುವುದು ಸಹಜ ಅನಿಸಿ ಅಪ್ಪನ ಅಸಮಾಧಾನ ಒಂದಲ್ಪ ತಗ್ಗಿತ್ತಾ? ಇರಬಹುದೇನೋ.

***

ಅಪ್ಪ ಮಗನ ಜೊತೆ ಅವನ ಐಷಾರಾಮಿ ಅರಮನೆಗೆ ಹೋಗಿರಲು ಖಡಾಖಂಡಿತವಾಗಿ ನಿರಾಕರಿಸಿದ್ದರು. 'ಕಾಲ ಬರಲಿ, ಆಗ ನೋಡೋಣ...' ಅಂದಿದ್ದರು. 'ಎಷ್ಟೋ ಜನರ ಮಕ್ಕಳು ಫಾರಿನ್‌ನಲ್ಲಿದ್ದು ಇಲ್ಲಿ ಹೆತ್ತವರು ಇಬ್ಬಿಬ್ಬರೇ ಇರುವುದಿಲ್ಲವೇ? ಕೊನೆಗೆ ಒಂಟೊಂಟಿಯಾಗಿ ಕೂಡಾ? ನೀನಂತೂ ಒಂದು ಫೋನ್ ಮಾಡಿದರೆ ಅರ್ಧ, ಮುಕ್ಕಾಲು ಗಂಟೆಯಲ್ಲಿ ಬರುವಷ್ಟು ಹತ್ತಿರದಲ್ಲಿರುತ್ತಿ. ಮತ್ತೇನು?' ಎನ್ನುವುದು ಅವರ ವಾದ. ಅದಕ್ಕೆ ಅಮ್ಮನ ಸಪೋರ್ಟು. ಬೆಳಗಾಗೆದ್ದರೆ ಗೇಟಿನ ಬಳಿ ನಿಂತು ಆಚೀಚಿನವರ ಜೊತೆ ಲೋಕಾಭಿರಾಮ ಹಂಚಿಕೊಳ್ಳುವ ಅಪ್ಪ, ಮನೆಬಾಗಿಲಿಗೆ ಹಾಲಿನ ಪ್ಯಾಕೆಟ್ ಬಂದು ಬೀಳುವ ವ್ಯವಸ್ಥೆ ಇದ್ದರೂ ಕಾಲಾಡಿಸಿಕೊಂಡು ಬರುವ ನೆಪದಲ್ಲಿ ಹಾಲಿನ ಬೂತ್‌ವರೆಗೆ ನಡೆದು ಹೋಗುವ ಅಪ್ಪ, ದೇವರಪೂಜೆಗೆ ಅಗತ್ಯವಾದಷ್ಟು ಹೂಗಿಡಗಳನ್ನು ಇರುವ ಅಂಗೈಯಗಲದ ಜಾಗದಲ್ಲೇ ಬೆಳೆಸಿಕೊಂಡು ಮುತುವರ್ಜಿಯಿಂದ ದೇಖರೇಖಿ ಮಾಡುವ ಅಪ್ಪ, ಬೆಳಗಿನ ತಿಂಡಿಗೆ ಅವಸರಿಸಿ ಸನಿಹದ ಪಾರ್ಕಿಗೆ ವಾಕಿಂಗಿನ ನೆಪದಲ್ಲಿ ಹೋಗಿ ಸಮವಯಸ್ಕರೊಂದಿಗೆ ಮನಸೋಇಚ್ಛೆ ಹರಟೆ ಹೊಡೆದು, ಎಲ್ಲರೊಡನೆ ಕಾಫಿ ಕುಡಿದು ಬರುವ ಅಪ್ಪ. ಅಮ್ಮ ಮತ್ತೇನು? ಅವಳಿಗೆ ದಿನಬೆಳಗಾದರೆ ಆಯಾಯಾ ವಾರದ ಜೊತೆ ಬೆಸೆದುಕೊಂಡಿರುವ ದೇವಸ್ಥಾನಗಳಿಗೆ ಹೋಗಲು ಇಲ್ಲಿ ಜೊತೆಗಾತಿಯರಿದ್ದಾರೆ.

ಸಂಜೆಯ ಹೊತ್ತು ಸಹಸ್ರನಾಮ, ಭಜನೆ ಹೇಳಿಕೊಳ್ಳುವ ಒಂದು ಗುಂಪು ಕಡ್ಡಾಯವಾಗಿ ಸನಿಹದ ದೇವಸ್ಥಾನದಲ್ಲಿ ಒಗ್ಗೂಡುತ್ತದೆ. ಅಪ್ಪನಂತೆಯೇ ನೆರೆಹೊರೆಯವರೊಂದಿಗೆ ಅಂಟು, ನಂಟು ಬೆಸೆದುಕೊಂಡಿದೆ. ಕೊನೆಗೆ ಬೀದಿಯಲ್ಲಿ ತರಕಾರಿ ಗಾಡಿ ತಳ್ಳಿಕೊಂಡು ಬರುವವನೊಂದಿಗೂ ಯೋಗಕ್ಷೇಮದ ಮಾತು ನಡೆಯುತ್ತಿರುತ್ತದೆ. ಇಲ್ಲಿನ ವಾತಾವರಣದ ಅನುಬಂಧ ಅವರಿಗೆ ಎಷ್ಟು ಮೈಯುಂಡು ಹೋಗಿದೆಯೆಂದರೆ ಬೇರೊಂದು ಕಡೆ ವಾಸ್ತವ್ಯ ಬದಲಿಸುವುದೆಂದರೆ ಆಳವಾಗಿ ಬೇರು ಬಿಟ್ಟ ಮರವೊಂದನ್ನು ಕಿತ್ತು ಬೇರೆಡೆಗೆ ನೆಡುತ್ತೇನೆನ್ನುವಂತೆ ಹಾಸ್ಯಾಸ್ಪದ. ಹೇಳುತ್ತಿದ್ದಳು ಅಮ್ಮ, 'ಅಯ್ಯಬ್ಬಾ, ಲಿಫ್ಟಿನಲ್ಲಿ ಓಡಾಡೋದು ಅಂದ್ರೆ ಹೆದರಿಕೆಯಾಗುತ್ತೆ ನಂಗೆ. ಅದೆಲ್ಲಾ ನಂಗೆ ಬರೋದೂ ಇಲ್ಲ.'

'ಎಲ್ಲಾ ಕಲಿತಿರ್ಬೇಕು ಅಮ್ಮಾ, ಅಭ್ಯಾಸ ಆದ್ರೆ ಎಷ್ಟು ಸಲೀಸು ಅಂತ ನಿಂಗೇ ಗೊತ್ತಾಗುತ್ತೆ...'

'ಈ ವಯಸ್ಸಲ್ಲಿ ಏನು ಕಲಿಯೋದು? ಕಲಿತಿರೋದೇ ಬೇಕಾದಷ್ಟಾಯ್ತು. ಮಣ್ಣಿನ ಸಂಪರ್ಕ ಇಲ್ದೆ ನೆಲ ಬಿಟ್ಟು ಮೇಲಿರೋಕೆ ನಂಕೈಲಿ ಸಾಧ್ಯಾನೇ ಇಲ್ಲ' ಅಂದಿದ್ದಳು ಅಮ್ಮ. ಒಟ್ಟಿನಲ್ಲಿ ಕೇವಲ ಸಂತೋಷನ ಕುಟುಂಬ ಇಷ್ಟು ವರ್ಷಗಳ ತಮ್ಮ ವಾಸ್ತವ್ಯ ಬದಲಿಸಿ ಹೊಸಮನೆಗೆ ವಲಸೆ ಹೋಗುವುದು ಖಾತರಿಯಾಗಿತ್ತು ಮತ್ತು ಅಪ್ಪ, ಅಮ್ಮ ಇಲ್ಲಿಯೇ ಉಳಿದುಕೊಳ್ಳುವುದೆಂಬುದೂ ಕೂಡ

***

ಇದು ಹೀಗೆಯೇ ಆಗುತ್ತದೆಂಬುದು ಗೊತ್ತಿರಲಿಲ್ಲವೇ ಸಂತೋಷನಿಗೆ? ಖಂಡಿತಕ್ಕೂ ಗೊತ್ತಿತ್ತು. 'ಬೇಡ, ಅಪವಾದ ನನ್ನ ಮೇಲೆ ಬರುತ್ತೆ' ಅಂದಿದ್ದಳು ಮಡದಿ. ಸಂತೋಷ ತನ್ನ ಆತಂಕವನ್ನು ಅವಳಿಗೆ ದಾಟಿಸಿದ್ದ. ಕೆಲವರ್ಷಗಳಿಂದ ಆರಂಭವಾದ ಆತಂಕ. ಅಪ್ಪ, ಅಮ್ಮನಿಗೆ ವಯಸ್ಸಾಗುತ್ತಾ ಬಂದಂತೆ ಕಾಡತೊಡಗಿದ್ದ ಅಳುಕು. ಹಣ್ಣೆಲೆ ಉದುರಿದ ಮೇಲೆ ಅಪ್ಪ ಮಾಡಿಟ್ಟಿರುವ ಈ ಆಸ್ತಿ ಇಬ್ಬರು ಮಕ್ಕಳಲ್ಲಿ ಸಮಪಾಲು ಆಗಬೇಕೆನ್ನುವುದು ವಾಸ್ತವ. ಅನಿವಾರ್ಯ. ಅವತ್ತಿನ ಬೆಲೆಯ ಲೆಕ್ಕಾಚಾರದಲ್ಲಿ ಅರ್ಧದಷ್ಟನ್ನು ಅಕ್ಕನಿಗೆ ಕೊಟ್ಟು ಮನೆಯನ್ನು ಸ್ವಂತದ್ದಾಗಿಸಿಕೊಳ್ಳುವುದು ನ್ಯಾಯೋಚಿತ. ಅಕ್ಕನಿಗಿರುವ ಹಕ್ಕನ್ನು ಕಸಿದುಕೊಳ್ಳಬೇಕೆನ್ನುವ ದುರ್ಬುದ್ಧಿ ಖಂಡಿತಾ ಸಂತೋಷನಿಗಿಲ್ಲ. ಅವನು ಅಂದುಕೊಳ್ಳುತ್ತಿರುವುದೇ ಬೇರೆ. ಹಾಗೆ ಅಕ್ಕನಿಗೆ ಅರ್ಧ ಪಾಲಿನ ಹಣ ಕೊಟ್ಟು ಈ ಹಳೆಮನೆಯಲ್ಲೇ ಜೀವನಪೂರ್ತಿ ಕಳೆಯಬೇಕೆಂಬ ಉದ್ದೇಶ ಅವನಿಗಿಲ್ಲ, ಮನೆಯ ಕುರಿತಾಗಿ ಎಷ್ಟೇ ಸೆಳೆತ ಇದ್ದರೂ ಕೂಡ. ಒಂದೊಳ್ಳೆಯ ದೊಡ್ಡ ಕಾರು ಖರೀದಿಸಿದರೂ ನಿಲ್ಲಿಸಿಕೊಳ್ಳುವಷ್ಟು ಈ ಮನೆಯಲ್ಲಿ ಅನುಕೂಲತೆಯಿಲ್ಲ. ಇಲ್ಲಿ ಎಲ್ಲರೂ ರಸ್ತೆಬದಿಯಲ್ಲಿ, ತಂತಮ್ಮ ಮನೆಯ ಕಾಂಪೌಂಡಿನೆದುರು ಕಾರು ನಿಲ್ಲಿಸಿಕೊಳ್ಳುವವರು. ಸಂತೋಷ ಕೂಡ. ಅನುಭವಿಸುವ ಯೋಗ್ಯತೆಯಿದ್ದರೂ ಅದನ್ನು ಉಪಯೋಗಿಸಿಕೊಳ್ಳದೆ ಯಾವುದೋ ಮುಲಾಜಿಗೆ ಕಟ್ಟು ಬಿದ್ದಂತೆ ಇಷ್ಟು ವರ್ಷ ಇದೇ ಮನೆಯಲ್ಲಿ ಕಾಲ ಹಾಕಿದ್ದಾಯ್ತು. ಈಗ ಕೈಯಲ್ಲಿ ದುಡ್ಡಿದೆ. ಒಂದಿಷ್ಟು ಸಾಲ ತೆಗೆದುಕೊಂಡರೂ ತೀರಿಸುತ್ತೇನೆಂಬ ನಂಬಿಕೆಯಿದೆ.

'ಮುಂದೆ ನೋಡಿಕೊಂಡರಾಯ್ತು' ಎನ್ನುತ್ತಾ ಕಾಲ ತಳ್ಳಿದರೆ ಆಸ್ತಿಯ ಬೆಲೆ ಏರುತ್ತಲೇ ಇರುತ್ತದೆ. ಅಲ್ಲದೆ ಆ 'ಮುಂದೆ?' ಅಂದರೆ ಏನರ್ಥ? 'ಅಪ್ಪ ಕಾಲವಾದ ನಂತರ' ಅಂದುಕೊಳ್ಳುವುದೇ ಸಂತೋಷನಂತಹ ಸುಸ್ವಭಾವಿ ಯುವಕನಿಗೆ ದುರ್ಯೋಚನೆ ಅನಿಸುತ್ತದೆ. ಮನಸ್ಸಿಗೆ ಕಸಿವಿಸಿಯಾಗುತ್ತದೆ.

ಅದೇನೇ ಇರಲಿ, ಅಕ್ಕನಿಗೆ ಕೋಟಿಗಟ್ಟಲೆಯ ಲೆಕ್ಕದಲ್ಲಿ ಅರ್ಧಾಂಶದ ಹಣ ಪಾವತಿಸಿ ಈ ಹಳೆಮನೆಯಲ್ಲೇ ಕಾಲ ತಳ್ಳಬೇಕಾದ ಅಗತ್ಯವಾದರೂ ಏನಿದೆ? ಮಕ್ಕಳಿಗೆ ಓದಿಕೊಳ್ಳಲು ಒಂದು ಪ್ರತ್ಯೇಕ ಕೋಣೆಯೂ ಇಲ್ಲ ಅನ್ನುವುದಕ್ಕೆ ಒತ್ತು ಕೊಟ್ಟರೆ ಮೇಲೆ ಮತ್ತೆರಡು ರೂಮು ಕಟ್ಟಿಸೋಣ ಅನ್ನುವಂತವರು ಅಪ್ಪ. ಸಂತೋಷ ಹೆಂಡತಿಯ ಹತ್ತಿರ ತನ್ನ ಮನಸ್ಸು ಬಿಚ್ಚಿಟ್ಟಿದ್ದ, 'ಇನ್ನೂ ಇನ್ನೂ ಮೀನಾಮೇಷ ಎಣಿಸ್ತಿರೋದ್ರಲ್ಲಿ ಅರ್ಥ ಇಲ್ಲ ಕಣೇ.' ಆ ಕಾಲ ಬಂದ ಹೊತ್ತಿಗೆ ನೋಡ್ಕಳ್ಳೋಣ ಅಂತ ಕೂತ್ಕೊಂಡ್ರೆ ಆ ಕಾಲ ಬರೋ ಹೊತ್ತಿಗೆ ಈಗಿನ ವಯಸ್ಸು, ಹುಮ್ಮಸ್ಸು ಇದ್ದೇ ಇರುತ್ತೆ ಅಂತ ಹೇಳೋಕಾಗಲ್ಲ. ಆ ಕಾಲವನ್ನ ಮನಸ್ಸಲ್ಲಿ ಕಲ್ಪಿಸಿಕೊಳ್ಳೋದೂ ಅಪರಾಧ ಅನಿಸುತ್ತೆ. ನಮಗೂ ನಮ್ಮದೇ ಆದಂತಾ ಆಸೆ, ಆಕಾಂಕ್ಷೆ ಇರಬಾರ್ದಾ? ಅಪ್ಪನಿಗೆ ಇದನ್ನೆಲ್ಲಾ ಬಾಯ್ಬಿಟ್ಟು ಹೇಳೋಕಾಗುತ್ತೇನೇ? 'ನೀವು ಹೋದಮೇಲೆ ಹೀಗ್ಗೀಗೆ ಆಗ್ಬೇಕಾಗುತ್ತೆ ಅನ್ನೋದು ನನ್ನ ಮಟ್ಟಿಗಂತೂ ಕ್ರೌರ್ಯ ಅನಿಸುತ್ತೆ. ಏನಂತಿ?'

'ಮಾರಾಯ್ರೇ, ಅದೊಂದು ಕೆಲಸ ಮಾಡ್ಬೇಡಿ. ಅವರಾಗಿ ಅರ್ಥ ಮಾಡ್ಕೊಂಡ್ರೆ ಅದೊಂದು ಥರ...' ಅಂದಿದ್ದಳು ಮಡದಿ. ಕೆಲಕೆಲವು ಸಂದರ್ಭಗಳಲ್ಲಿ, ಕೆಲಕೆಲವು ನಿರ್ಣಯಗಳಿಗೆ, ಹೇಳಿಕೊಳ್ಳಬಹುದಾದ ಕಾರಣಗಳಂತೆ ನುಂಗಿಕೊಳ್ಳಬೇಕಾದ ಕಾರಣಗಳೂ ಇರುತ್ತವೆ ಎಂದು ಪುನರುಚ್ಚರಿಸುತ್ತಾ ಮುಕ್ತಾಯವಾಗುತ್ತದೆ ಕಥೆ.

ಪ್ರತಿಕ್ರಿಯಿಸಿ: feedback@sudha.co.in